# <u>ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು</u>

**<u>ಎಸ್.ಸಿ. ಕೇಸ್ ಸಂಃ238/2018</u>**

ಪಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ವಿದ್ಯಾರಣ್ಯಪುರಂ ಪೋಲೀಸ್ ಠಾಣೆಯ
ಠಾಣಾಧಿಕಾರಿಯಿಂದ ಪ್ರತಿನಿಧಿಸಲ್ಪಟ್ಟಿದೆ.

ಃ ವಿರುದ್ಧ ಃ

ಆರೋಪಿತರು ಎಸ್.ಗಣಪತಿ ಸುರೇಶ ಭಟ್ ಅಃ ಗಣೇಶ

## <u>ದೋಷಾರೋಪಣೆ</u>

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ **ಶ್ರೀಮತಿ ಸರಸ್ವತಿ ವಿಷ್ಣು ಕೋಸಂದರ್**, ನಾನು ಈ ಕೆಳಕಂಡ ಆರೋಪಿತರಾದ

ಎಸ್.ಗಣಪತಿ ಸುರೇಶ ಭಟ್ ಅಃ ಗಣೇಶ ಬಿನ್ ಸುರೇಶ ಭಟ್, 27 ವರ್ಷ, ವಾಸಃ ಮನೆ ನಂ.241, ಎಳಮನೆ ಗ್ರಾಮ, ಮಲವಳ್ಳಿ, ಬಾರೆ ಪೋಸ್ಟ್ ಯಲ್ಲಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿಃ 28.01.2018 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ಮೈಸೂರು ನಗರ ವಿದ್ಯಾರಣ್ಯಪುರಂ ಪೋಲೀಸ್ ಠಾಣೆ ವ್ಯಾಪ್ತಿಯ ಜೆ.ಪಿ.ನಗರ 2 ನೇ ಹಂತ, 29 ನೇ ಮೇನ್, ಮನೆ ನಂ.ಇಡಬ್ಲ್ಯೂಎಸ್ 12 ರಲ್ಲಿ ಚಾಸಾ-1 ಉಮಾಪತಿಭಟ್ ರವರ ಪತ್ನಿ ಆಶಾ ಯು.ಭಟ್ ರವರು ವಿದ್ಯಾರಣ್ಯ ಆಸ್ಪತ್ರೆಗೆ ದಾಖಲಾಗಿ, ಆಕೆಯು ದಿನಾಂಕಃ 29.01.2018 ರಂದು ಬೆಳಿಗ್ಗೆ 10.00 ಗಂಟೆಯಲ್ಲಿ ಮೃತಪಟ್ಟಿದ್ದು, ಮೃತೆ ಆಶಾರವರು ಬರೆದಿದ್ದ ಡೆತ್ ನೋಟ್ ಪ್ರಕಾರ ಆರೋಪಿಯಾದ ನೀನು, ನಿನ್ನ ಮೊಬೈಲ್ ಸಂಖ್ಯೆ 9148165844, 8762816865, 7829558853 ರಿಂದ ಮೃತೆಯ ಮೊಬೈಲ್ ಸಂಖ್ಯೆ 8618256379, 8277231783 ಹಾಗೂ 9964666811 ಗೆ ಆಗಾಗ್ಗೆ ಕರೆ ಮಾಡಿ ಲವ್ ಮಾಡು ಎಂದು ಹೆದರಿಸಿದ್ದಲ್ಲದೆ, ಮೃತೆಯ ಮನೆಯ ಬಳಿಗೆ ಹೋಗಿ ಲವ್ ಮಾಡು ಎಂದು ಪೀಡಿಸಿ

ಆಕೆಯು ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆ ನೀಡಿ, ಆಕೆಯ ಸಾವಿಗೆ ಆರೋಪಿಯಾದ ನೀನು ಕಾರಣನಾಗಿದ್ದು, ಈ ಮೂಲಕ ನೀನು ಭಾರತ ದಂಡ ಸಂಹಿತೆ ಕಲಂ 306 ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪದಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಶ್ರೀಮತಿ ಸರಸ್ವತಿ ವಿಷ್ಣು ಕೋಸಂದರ್)**

ದಿಃ 18.01.2021

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.